13TH JULY 2009

ಅಧ್ಯಕ್ಷರು : ಈಗ ಪ್ರಶ್ನೋತ್ತರ

1. ನಿಯಮ 60ರ ಅಡಿಯಲ್ಲಿ ನೀಡಿರುವ ನಿಲುವಳಿ ಸೂಚನೆಗೆ ಅವಕಾಶ ಕೋರಿಕೆ. ವಿಷಯ: ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಬಗ್ಗೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲಿ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಅದು ಆಗಲೇ ತಮ್ಮ ಗಮನಕ್ಕೆ ಬಂದಿರಬಹುದು ಎಂದು ಅಂದುಕೊಂಡಿದ್ದೇನೆ. ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಸಂಬಂಧಪಟ್ಟಂಥ ಮಂತ್ರಿಗಳಿಗೂ ಕೂಡ ಅದು ಹೋಗಿದೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಸೋಣ. ಆಮೇಲೆ ನೀವು preliminary submission ಮಾಡಿ.

ಶ್ರೀ ಸಿದ್ದರಾಮಯ್ಯ : ನಾನು preliminary submission ಮಾಡುತ್ತೇನೆ. ನಿಯಮ 60ರ ಅಡಿಯಲ್ಲಿ ನೋಟೀಸ್ ಕಳುಹಿಸಿಬಿಟ್ಟು , submission ಮಾಡದೇ ಹೋದರೆ ಅದರ ಮಹತ್ವ ಹೋಗಿ ಬಿಡುತ್ತದೆ. ಇದು ಬಹಳ ಮಹತ್ವದ ವಿಚಾರ. ಈಗ ಕರ್ನಾಟಕ ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಇದೆ ಎಂದು ಹೇಳಿ ದಾವಣಗೆರೆಯಲ್ಲಿ, ಹಾವೇರಿಯಲ್ಲಿ,...

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ,ಒಂದೇ ಒಂದು ನಿಮಿಷ.

ಶ್ರೀ ಸಿದ್ದರಾಮಯ್ಯ :ತಾವು ಆಮೇಲೆ ಮಾತನಾಡಿ. ನಾವು ಎದ್ದುನಿಂತುಕೊಂಡ ತಕ್ಷಣವೇ ನೀವು objection raise ಮಾಡಿದರೆ ಹೇಗೆ ಸಂಸದೀಯ ಸಚಿವರೇ?

ಶ್ರೀ ಎಸ್.ಸುರೇಶ್ ಕುಮಾರ್ :ನಾನು ಸಭಾಧ್ಯಕ್ಷರ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ.

ಅಧ್ಯಕ್ಷರು ; ನಾನು ಏನು ಹೇಳುತ್ತೇನೆ ಎಂದರೆ ಈಗ ಪ್ರಶ್ನೋತ್ತರವನ್ನು ಮುಗಿಸಿ ಬಿಡೋಣ. ಪ್ರಶ್ನೋತ್ತರ ಮುಗಿಸಿಬಿಟ್ಟು ಆಮೇಲೆ ನೀವು ಹೇಳುವುದು, ಅವರು ಹೇಳುವುದು ಎಲ್ಲವನ್ನೂ ಕೇಳೋಣವಂತೆ.

ಶ್ರೀ ಸಿದ್ದರಾಮಯ್ಯ : ತಾವು ಕೇಳಿ. ಅದಕ್ಕೆ ನನ್ನದೇನೂ ತಕರಾರಿಲ್ಲ. ನಾನು ಹೇಳುವುದೇನೆಂದರೆ, ಇವತ್ತು ಇಡೀ ರಾಜ್ಯದಲ್ಲಿ ಬಹಳ ಮಹತ್ವವಾದ. . . .

ಶ್ರೀ ಎಸ್.ಸುರೇಶ್ ಕುಮಾರ್ :ಮಾನ್ಯ ಸಭಾಧ್ಯಕ್ಷರೇ, ಈಗ ಪ್ರತಿಪಕ್ಷದ ನಾಯಕರು . . . .

ಶ್ರೀ ಸಿದ್ದರಾಮಯ್ಯ : ನನ್ನನ್ನು ಕರೆದಿದ್ದಾರೆ. ನಾನು ಮಾತನಾಡುತ್ತಾ ಇರುವಾಗ ತಾವು ಮಧ್ಯದಲ್ಲಿ ಎದ್ದರೆ ಹೇಗೆ?

ಶ್ರೀ ಎಸ್.ಸುರೇಶ್ ಕುಮಾರ್ : ನಾನು ಅವರ ಅನುಮತಿಯನ್ನು ಕೇಳುತ್ತಿದ್ದೇನೆ.

ಶ್ರೀ. ಸಿದ್ದರಾಮಯ್ಯ : ನಾನು ಅವರ ಅನುಮತಿ ತೆಗೆದುಕೊಂಡು ಆಗಿದೆ. I am not yielding. ನಾನು ಮಾತನಾಡಿದ ಮೇಲೆ ಅವರೇನು ಹೇಳಬೇಕೋ ಹೇಳಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು): ರಸಗೊಬ್ಬರದ ವಿಚಾರ ಎಲ್ಲರಿಗೂ ಗೊತ್ತಿರುವಂಥದ್ದು. Question hour ಆದ ಮೇಲೆ ಯಾರು ಏನು ಬೇಕಾದರೂ raise ಮಾಡಲಿ. ಪ್ರತಿನಿತ್ಯವೂ ಒಂದೊಂದು ಮಹತ್ವವಾದ ವಿಷಯಗಳಿರುತ್ತವೆ. Question hour ಗೆ ಮಹತ್ವವಿಲ್ಲ. ನಾವು ಹೀಗೆ ಮಾಡಬಹುದೆಂದು ಸಿದ್ದರಾಮಯ್ಯನವರು, ವಿರೋಧ ಪಕ್ಷದ ನಾಯಕರಾಗಿ ಹೇಳುವುದಾದರೆ, ನಮ್ಮದ್ಯಾರದೂ ಅಭ್ಯಂತರವಿಲ್ಲ.ಆದರೆ ಅವರು ಆಮೇಲೆ ಮಾತನಾಡಬಹುದಲ್ಲವೇ? ನಿಮಗೆ ಯಾರು ಬೇಡವೆಂದು ಹೇಳಿದರು? No, it is not fair sir. ಯಾವುದೇ ಕಾರಣಕ್ಕೂ ಈ ರೀತಿಯ ಹೊಸ ಪದ್ದತಿಯನ್ನು ಹಾಕುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಸಿದ್ದರಾಮಯ್ಯ : ಎಲ್ಲಾ ದಿನಗಳಲ್ಲೂ ಕೂಡ ಈ ತರಹದ ಪ್ರಶ್ನೆಗಳು ಬರುವುದಿಲ್ಲ. ಬಹಳ ಮಹತ್ವವಾದ ವಿಚಾರ, ಸಾರ್ವಜನಿಕ ಮಹತ್ವದ ವಿಚಾರಗಳು, ತುರ್ತಾದ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಸನ್ಮಾನ ವಿರೋಧ ಪಕ್ಷದ ನಾಯಕರೆ, ನಾನು ನಿಮಗೆ ಅವಕಾಶ ಕೊಡುವುದಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು, ನಮಗೆ ಯೂರಿಯಾ ಗೊಬ್ಬರದ ಕೊರತೆ ಇದೆ ಎಂದು ಹೇಳುತ್ತಾರೆ. ಮಾನ್ಯ ಕೃಷಿ ಸಚಿವರು ನಮಗೆ ಗೊಬ್ಬರದ ಕೊರತೆ ಇಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಹೆಜ್ಜೆ ಮುಂದೆ ಹೋಗಿ, ಗೊಬ್ಬರದ ಅಭಾವ ಏನಾದರೂ ಬಂದಿದ್ದರೆ, ಯೂರಿಯಾ ಕೊರತೆಯಾಗಿದ್ದರೆ, ಇದಕ್ಕೆ ಕೇಂದ್ರ ಸರ್ಕಾರದವರೇ ಹೊಣೆಗಾರರು, ನಾವ್ಯಾರೂ ಹೊಣೆಗಾರರಲ್ಲ ಎಂದು ಹೇಳಿ, ವಿರೋಧ ಪಕ್ಷದವರು ಕೇಂದ್ರಕ್ಕೆ ಹೋಗಿ ಗೊಬ್ಬರ ತರುವುದು ಬಿಟ್ಟು ನಮ್ಮ ಬಗ್ಗೆ ಏನೇನೋ ಟೀಕೆ ಮಾಡುತ್ತಿದ್ದಾರೆ. ಅವರು ಟೀಕೆಗಳನ್ನು ಮಾಡುವುದನ್ನು ಬಿಟ್ಟುಬಿಡಬೇಕು, ಕೇಂದ್ರಕ್ಕೆ ಹೋಗಿ ಗೊಬ್ಬರ ತರಬೇಕೆಂದು ಹೇಳಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ, ಹರಿಹರದಲ್ಲಿ ಗಲಾಟೆಯಾಗಿದೆ. ಕೃಷಿ ಸಚಿವರ ಜಿಲ್ಲೆಯಲ್ಲಿ ಗಲಾಟೆಯಾಗಿದೆ, ಹಾವೇರಿಯಲ್ಲಿ ಗಲಾಟೆಯಾಗಿದೆ, ರಾಣೆಬೆನ್ನೂರಿನಲ್ಲಿ ಗಲಾಟೆಯಾಗಿದೆ.

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ಮುಗಿಯಲಿ. preliminary submission ಪ್ರಾರಂಭ ಮಾಡಿದರೆ, ಮತ್ತೆ ಇದಕ್ಕೆ ಉತ್ತರ ಕೊಡಬೇಕಾಗುತ್ತದೆ.

ಇದರಿಂದ ಪ್ರಶ್ನೋತ್ತರದ ಅವಧಿ ಮುಗಿದುಹೋಗುತ್ತದೆ. ನಾನು ತಮ್ಮಲ್ಲಿ request ಮಾಡುವುದೇನೆಂದರೆ, ನೀವು preliminary submission ಮಾಡುವುದಕ್ಕೆ ನಮ್ಮದೇನೂ ತಕರಾರಿಲ್ಲ. ಆದರೆ, ಮೊದಲು ಪ್ರಶ್ನೋತ್ತರ ಮುಗಿಸಲೆಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : please allow me to make preliminary submission. You take any decision afterwards. My request to the chair is to allow me to make a preliminary submission.

ಅಧ್ಯಕ್ಷರು : ಅದೇ preliminary submission ಮಾಡುವಿರಂತೆ. ಏಕೆಂದರೆ, ಈಗ ನೀವು submission ಮಾಡಿದರೆ, ಮತ್ತೆ ಅದಕ್ಕೆ ಅವರು reply ಕೊಡಬೇಕು. Again ವಾದ ವಿವಾದ start ಆಗುತ್ತದೆ. ಅದಕ್ಕೆ ನಾನೇನು ಹೇಳುತ್ತಿದ್ದೇನೆಂದರೆ, ತಮಗೆ submission ಮಾಡಲಿಕ್ಕೆ ಅಧಿಕಾರವಿದೆ, ಇಲ್ಲವೆಂದು ಹೇಳುತ್ತಿಲ್ಲ. ಅದಕ್ಕೆ ನಾನು ಅವಕಾಶವನ್ನೂ ಕೊಡುತ್ತೇನೆ. ಆದರೆ ಈಗ Question hour ಮುಗಿಯಲಿ. ಅದು ಮುಗಿದ ತಕ್ಷಣ ತಾವು raise ಮಾಡುವಿರಂತೆ. Please.

ಶ್ರೀ ಸಿದ್ದರಾಮಯ್ಯ : ದಯಮಾಡಿ, ನಾನೇನು ಹೇಳುತ್ತೇನೆ ಅದನ್ನು ಕೇಳಿ you take a decision after my submission.

ಅಧ್ಯಕ್ಷರು : ಇದಕ್ಕೆ ನಾನೇನು ಹೇಳುವುದು.

ಶ್ರೀ ಎಸ್. ಸುರೇಶ್‌ಕುಮಾರ್ : ಒಂದು ನಿಮಿಷ ನಾನು ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾನಿನ್ನೂ ಮಾತನಾಡಿ ಮುಗಿಸಲೇ ಇಲ್ಲ.

ಅಧ್ಯಕ್ಷರು : ಅದಕ್ಕೆ ನಾನು ಹೇಳುತ್ತಿದ್ದೇನೆ, Question hour ಮುಗಿಯಲಿ.

ಶ್ರೀ ಎಸ್. ಸುರೇಶ್‌ಕುಮಾರ್ : ಆ ಮಾತಿಗೆ ನಾನೊಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಇಲ್ಲ, ಇಲ್ಲ, ಆಮೇಲೆ ಹೇಳುವಿರಂತೆ.

ಅಧ್ಯಕ್ಷರು : Immediately after Question hour, ನಿಮಗೆ ಅವಕಾಶ ಕೊಡುತ್ತೇನೆ. ಅದು maintain ಆಗುತ್ತದೆಯೋ, ಇಲ್ಲವೋ ಎನ್ನುವ ಬಗ್ಗೆ ಆಡಳಿತ ಪಕ್ಷದವರು ಉತ್ತರ ಕೊಡುತ್ತಾರೆ. ಇದರಿಂದಾಗಿ time ಹೋಗುತ್ತದೆ. ನೀವು ಮೊದಲು preliminary submission ಮಾಡಬೇಕಾಗುತ್ತದೆ. ಈಗ ನಿಲುವಳಿ ಸೂಚನೆ maintain ಆಗುತ್ತದೆಯೋ, ಇಲ್ಲವೋ ಎನ್ನುವುದರ ಬಗ್ಗೆ ಅವರು ಉತ್ತರ ಕೊಡುತ್ತಾರೆ. ಹೀಗಾಗಿ, ನಮ್ಮ time ಇದಕ್ಕೇ ಹೋಗುತ್ತದೆ. ಇದರ ಬದಲು ಮೊದಲು Question hour ತೆಗೆದುಕೊಳ್ಳೋಣ. Question hour ಆದ ಮೇಲೆ ನೀವೇನು submission ಮಾಡುತ್ತೀರೋ, ಅವರೇನು ಉತ್ತರ ಕೊಡುತ್ತಾರೆಯೋ ನೋಡಿಕೊಂಡು I will take a decision.

ಶ್ರೀ ಸಿದ್ದರಾಮಯ್ಯ ; ಅದಕ್ಕೆ ನಾನೇನು ಃ ಹೇಳುತ್ತೇನೆಂದರೆ, ಬಹಳ ತೀವ್ರವಾಗಿರತಕ್ಕಂಥ ವಿಚಾರವಿದೆ.

ಅಧ್ಯಕ್ಷರು : Definitely, ನೀವು raise ಮಾಡಿರುವ issue urgency ಇದೆ. ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಇದು ಸದಸ್ಯರ ಹಕ್ಕಿನ ವಿಚಾರ, ರಾಜ್ಯದ ರೈತರಿಗೆ ಸಂಬಂಧಪಟ್ಟ ವಿಚಾರ, ಈಗ ಬಿತ್ತನೆ ಆಗತಕ್ಕಂಥ ಸಂದರ್ಭದಲ್ಲಿ ಗೊಬ್ಬರದ ಅಭಾವ ಇರುವ ಸಮಯದಲ್ಲಿ ಮುಖ್ಯಮಂತ್ರಿಗಳೇ ಗೊಬ್ಬರದ ಅಭಾವವಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : Question hour ಆದ ತಕ್ಷಣವೇ ತೆಗೆದುಕೊಳ್ಳೋಣ. First Question hour ಮುಗಿಯಲಿ.

ಶ್ರೀ ಸಿದ್ದರಾಮಯ್ಯ : ಗೊಬ್ಬರದ ಅಭಾವಕ್ಕೆ ಕೇಂದ್ರ ಸರ್ಕಾರ ಹೊಣೆಗಾರರೆಂದು ಹೇಳುತ್ತಿದ್ದಾರೆ. ರಾಜ್ಯ ಕೃಷಿ ಸಚಿವರು ತೊಂದರೆ ಇಲ್ಲ, ನಮಗೆ ಗೊಬ್ಬರ ಬಂದಿದೆ ಎಂದು ಹೇಳುತ್ತಾರೆ.

ಅಧ್ಯಕ್ಷರು : ಅದರ ಬಗ್ಗೆ ಅವರು ಉತ್ತರ ಹೇಳಲಿ. ಮೊದಲು Question hour ಮುಗಿಯಲಿ.

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು) : submission ಆಗಬೇಕೇ, ಬೇಡವೇ ಎನ್ನುವುದನ್ನೇ ತಾವು ತೀರ್ಮಾನ ಮಾಡಬೇಕಾಗಿರುವುದು ಇದೆ.

ಅಧ್ಯಕ್ಷರು : Question hour ಮುಗಿದ ತಕ್ಷಣ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ನೀವು ನಮ್ಮ ರಕ್ಷಣೆಗೆ ಬರದಿದ್ದರೆ ಹೇಗೆ?

ಅಧ್ಯಕ್ಷರು : ನಾನು ನಿಮ್ಮ ರಕ್ಷಣೆಗೆ ಬರುತ್ತೇನೆ. ಆದರೆ ಮೊದಲು Question hour ಮುಗಿಸೋಣ.

ಶ್ರೀ ಸಿದ್ದರಾಮಯ್ಯ : ರಾಜ್ಯದ ಹಿತ ಕಾಪಾಡುವವರು ಯಾರು? ರಾಜ್ಯದ ಜನರ ಮುಂದೆ ಹೇಳುವವರಾರು?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಪ್ರಥಮ ಬಾರಿಗೆ ರಾಜ್ಯ ಸರ್ಕಾರ 400 ಕೋಟಿ ರೂಪಾಯಿಗಳನ್ನು advance ಆಗಿ ಕೊಟ್ಟು ಗೊಬ್ಬರವನ್ನು ತರಿಸಿದೆ.

ಶ್ರೀ ಸಿದ್ದರಾಮಯ್ಯ : ಅದು ಬೇರೆ ವಿಚಾರ.

(ಗೊಂದಲ)

ಶ್ರೀ ಸಿದ್ದರಾಮಯ್ಯ : While you are replying, whatever you want to say, you can say.

ಅಧ್ಯಕ್ಷರು : ಅದಕ್ಕೆ ವಾದ ವಿವಾದ ಬೇಡ. ಮೊದಲು Question hour ಮುಗಿಯಲಿ.

ಶ್ರೀ ಸಿದ್ದರಾಮಯ್ಯ : I am pleading with the hon'ble speaker.

(ಗೊಂದಲ)

ಅಧ್ಯಕ್ಷರು : ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ Question hour time ಮುಗಿದು ಹೋಗುತ್ತದೆ. ಆದ್ದರಿಂದ, Question hour ಅನ್ನು ಮೊದಲು ಮುಗಿಸೋಣ. ಅದು ಮುಗಿದ ತಕ್ಷಣವೇ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ವಿರೋಧ ಪಕ್ಷದ ನಾಯಕರು senior member ಇದ್ದಾರೆ. ನಿಯಮಾವಳಿ ಪಾಲನೆ ಮಾಡುವುದನ್ನು ಅವರಿಂದ ನಾವು ಅಭ್ಯಾಸ ಮಾಡುತ್ತೇವೆ.

ಅಧ್ಯಕ್ಷರು : ಇಲ್ಲಿ ಚರ್ಚೆ ಮಾಡಲಿಕ್ಕೆ ಬೇಡವೆನ್ನುವುದಿಲ್ಲ. ಚರ್ಚೆ ಮಾಡಲಿಕ್ಕೆ ನಾನು definitely ಅವಕಾಶ ಕೊಡುತ್ತೇನೆ. It is a question of one hour, ಒಂದು ತಾಸಿನಲ್ಲಿ ಏನೂ difference ಆಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಅವರಿಂದ ನಾವು ಅಪೇಕ್ಷೆ ಮಾಡುತ್ತೇವೆ.
ಶ್ರೀ ಸಿದ್ದರಾಮಯ್ಯ : ನಾನು ಮಾತನಾಡುವಾಗ ಮಂತ್ರಿಗಳಾದವರು ಮಧ್ಯೆ ಮಧ್ಯೆ ಎದ್ದು ನಿಂತು intervene ಮಾಡುವುದು it is not fair.

ಶ್ರೀ ಸಿದ್ದರಾಮಯ್ಯ : ನಾವು ಸಭಾಧ್ಯಕ್ಷರಿಗೆ request ಮಾಡಿಕೊಂಡಿದ್ದೇವೆ. I am not pleading with you, I am pleading with Hon'ble speaker. I am not requesting you, I am requesting the Hon'ble speaker.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : speaker ರವರು ಅವಕಾಶ ಕೊಟ್ಟರೆ submission ಮಾಡಿ. ಆದರೆ,ಅವರು ಅವಕಾಶ ಕೊಡದಿದ್ದರೂ submission ಮಾಡುತ್ತಿದ್ದೀರಲ್ಲ. ಇದು ಸರಿಯೇ? ನೀವೆಲ್ಲ senior members ಇದ್ದೀರಿ.

ಶ್ರೀ ಸಿದ್ದರಾಮಯ್ಯ : I am asking the Hon'ble speaker for submission.

(ಗೊಂದಲ)

ಅಧ್ಯಕ್ಷರು : ಸಿದ್ದರಾಮಯ್ಯನವರೆ, ಜಯಚಂದ್ರರವರೆ, ನನ್ನದೊಂದು request ಇದೆ.

(ಗೊಂದಲ)

ಅಧ್ಯಕ್ಷರು : ನೀವು ವಿಷಯ ಪ್ರಸ್ತಾಪಿಸುವುದಕ್ಕೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : Rule 69 ರಲ್ಲಿ Question hour ಗಿಂತ ಮುಂಚಿತವಾಗಿ ನಿಲುವಳಿ ಸೂಚನೆಯನ್ನು raise ಮಾಡಬಾರದೆಂದು ಇದೆಯೇ?

ಅಧ್ಯಕ್ಷರು :ಈ ಬಗ್ಗೆ ಸಾಕಷ್ಟು rulings ಇವೆ.

(ಗೊಂದಲ)

Mr.speker : Question hour ಆದ ತಕ್ಷಣ ನೀವು raise ಮಾಡಬಹುದು. This is my request. ಇಲ್ಲಿರುವ ಎಲ್ಲಾ ಶಾಸಕರು they are waiting for question hour. ಅವರೆಲ್ಲರಿಗೂ ಅವಕಾಶ ಕೊಡಬೇಕು. ನಂತರ, ಅವಕಾಶ ಕೊಡುತ್ತೇನೆ. ಒಂದು ತಾಸಿನಲ್ಲಿ ಏನೂ difference ಆಗುವುದಿಲ್ಲ. One hour ನಲ್ಲಿ ಏನೂ ಆಗುವುದಿಲ್ಲ.

ಅಧ್ಯಕ್ಷರು :ತಾವು ಸಾರ್ವಜನಿಕ ಮಹತ್ವದ ವಿಷಯವನ್ನು raise ಮಾಡಿತ್ತಿರುವುದನ್ನು ನಾನು ಒಪ್ಪಿಕೊಳ್ಳೋತ್ತಿದ್ದೇನೆ. ಆದರೆ, ಮೊದಲು Question hour ಆಗಲಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :ಈಗ ನಡೆದಿರುವ ಘಟನೆಯನ್ನು Zero hour ನಲ್ಲಿ ಅವರು raise ಮಾಡಬಹುದು.

ಶ್ರೀ ಟಿ.ಬಿ. ಜಯಚಂದ್ರ : Adjournment motion ಎಂದು ಒಂದು notice ಕೊಟ್ಟಾಗ . . . .

(ಗೊಂದಲ)

ಅಧ್ಯಕ್ಷರು : Question hour ಆದ ತಕ್ಷಣ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದೇನಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಅವರಿಗೆಷ್ಟು ಕಳಕಳಿ ಇದೆಯೋ, ಅದರ ನೂರು ಪಟ್ಟು ಸರ್ಕಾರಕ್ಕೆ ಕಳಕಳಿ ಇದೆ. ಅದಕ್ಕಾಗಿಯೇ, 400 ಕೋ.ರೂ.ಗಳನ್ನು advance ಆಗಿ ಕೊಟ್ಟು ಗೊಬ್ಬರ ತರಿಸಿದ್ದೇವೆ. ಇದನ್ನು ಯಾವ ಸರ್ಕಾರವೂ ಮಾಡಿಲ್ಲ. (ಗೊಂದಲ) ಅಂಥ ಕೆಲಸವನ್ನು ಈ ಸರ್ಕಾರ ಮಾಡಿದೆ.

ಶ್ರೀ ಸಿದ್ದರಾಮಯ್ಯ :ಅಧ್ಯಕ್ಷರು : ಬೊಮ್ಮಾಯಿಯವರೆ, ಒಂದು ನಿಮಿಷ ಸುಮ್ಮನಿರಿ. Rule 60ರಲ್ಲಿ ನಿಲುವಳಿ ಸೂಚನೆ ಬಗ್ಗೆ ಇದೆ.

ಶ್ರೀ ಸಿದ್ದರಾಮಯ್ಯ : English ನಲ್ಲಿ Rule 60ರಲ್ಲಿದೆ.

ಅಧ್ಯಕ್ಷರು : "ಅಧ್ಯಕ್ಷರು 60ನೇ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆ ಎಂದು ಅಭಿಪ್ರಾಯಪಟ್ಟರೆ, ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರ ವಿಷಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರೆಯಬೇಕು. ಅಂಥ ಸದಸ್ಯರು ತನ್ನ ಸ್ಥಾನದಲ್ಲಿ ಎದ್ದು ನಿಂತು ಸದನದಲ್ಲಿ ನಿಲುವಳಿ ಸೂಚನೆಯನ್ನು ತರಲು ಅನುಮತಿ ಕೇಳತಕ್ಕದ್ದು." ಎಂದಿದೆ. ಅಂದರೆ ಅಗ ಅನುಮತಿ ಕೇಳಬೇಕು. ಹಾಗಾಗಿ, Question hour ಮುಗಿಯಲಿ. ನಮ್ಮ time ಈ ತರಹದ ಚರ್ಚೆಯಲ್ಲಿಯೇ ಕಳೆದು ಹೋಗಿತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಿಯಮ 60ಏನು ಹೇಳುತ್ತದೆಂದರೆ: "ನಿಲುವಳಿ ಸುಚನೆಯನ್ನು ತರಲು ಅಧ್ಯಕ್ಷರ ಅನುಮತಿ ಅಗತ್ಯ" ಎಂದು ಇರುವುದರಿಂದ ಅದಕ್ಕಾಗಿಯೇ ನಿಮ್ಮ ಅನುಮತಿ ಕೇಳುತ್ತಿರುವುದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : With the consent of the speaker...

(ಗೊಂದಲ)

ಶ್ರೀ ಸಿದ್ದರಾಮಯ್ಯ : 'With the consent of the speaker' ಎಂದು ಇದೆ. ಅದಕ್ಕೋಸ್ಕರವೇ ನಿಮ್ಮ ಅನುಮತಿ ಕೇಳುತ್ತಿರುವುದು. "ಈ ನಿಯಮಗಳ ಉಪಬಂಧಗಳಿಗೊಳಪಟ್ಟು ಸಾರ್ವಜನಿಕವಾಗಿ ಅತ್ಯಂತ ಮಹತ್ವವೂ ಮತ್ತು ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯಕಲಾಪ-ನಿಲುವಳಿ ಬಗ್ಗೆ ಸೂಚನೆಯನ್ನು ತರಬಹುದು" ಎಂದು ಹೇಳಿದೆ. ಅದಕ್ಕಾಗಿ, ಇದನ್ನು ತರುವುದಕ್ಕೋಸ್ಕರ ನಿಮ್ಮ ಅನುಮತಿಯನ್ನು ಕೋರುತ್ತಿದ್ದೇವೆ. ನಿಮ್ಮ ಅನುಮತಿಯನ್ನೂ ಕೋರಲಿಕ್ಕೆ ಅವಕಾಶ ಕೊಡದೆಯೇ, ನಾವು ಹೇಳುವುದಕ್ಕೆಯೇ ಬಿಡದಿದ್ದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಾದ ತಾವು ಈಗೊಂದು submission ಮಾಡುತ್ತೀರಿ, ಅದಕ್ಕೆ ಸರ್ಕಾರದವರು ಉತ್ತರ ಕೊಡುತ್ತಾರೆ. Again it will take one hour or two hours. ಆಗ Question hour collapse ಆಗುತ್ತದೆ. ಅದಕ್ಕೋಸ್ಕರ Question hour ಮುಗಿಯಲಿ. ಹಿಂದೆಯೂ ನಾವು ಸಾಕಷ್ಟು ಸಲ ಈ ಸದನದಲ್ಲಿ ನಡೆಸಿದ್ದೇವೆ. ಹಿಂದಿನ ಬೇಕಾದಷ್ಟು proceedings ಅನ್ನು ತೆಗೆದು ನೋಡಿ. Question hour ಆದ ತಕ್ಷಣವೇ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದಕ್ಕೆ speaker ರವರು ಅವಕಾಶ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅನೇಕ ಸಾರಿ ಇಲ್ಲಿ ಕುಳಿತು ನೋಡಿದ್ದೇವೆ. ಆ ಕಡೆ ಕುಳಿತು ನೋಡಿದ್ದೇವೆ. ನಿಯಮ 60ರ ಅಡಿಯಲ್ಲಿ ಅನುಮತಿಯನ್ನು Question hour ಗಿಂತ ಮುಂಚಿತವಾಗಿ ಪ್ರಸ್ತಾಪ ಮಾಡುವುದು ಇದೆ.

ಅಧ್ಯಕ್ಷರು : ಯಾವುದೇ ಸಂದರ್ಭದಲ್ಲಿ ನೀವು ಪ್ರಸ್ತಾಪ ಮಾಡಿದಾಗಲೂ, Question hour ಆದ ತಕ್ಷಣ ಅವಕಾಶ ಕೊಡಲಾಗುತ್ತದೆ. ಹಿಂದೆಯೆಲ್ಲ, ನಿಲುವಳಿ ಸೂಚನೆಯನ್ನು Question hour ಆದ ತಕ್ಷಣ ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೆ ವಿರೋಧ ಪಕ್ಷದ ನಾಯಕರು ಕುಳಿತುಕೊಂಡಿದ್ದಾರೆ. ಈ ರೀತಿ ಸಾಕಷ್ಟು ಸಲ ಆಗಿದೆ.

ಶ್ರೀ ಸಿದ್ದರಾಮಯ್ಯ : ಅದು depending upon the urgency of the matter, seriousness of the matter and importance of the matter.

ಅಧ್ಯಕ್ಷರು : ನಿಲುವಳಿ ಸೂಚನೆಯ ಮೇಲೆ ತಂದಂಥ ವಿಷಯಗಳು ಹೆಚ್ಚು ಕಡಿಮೆ urgency ಯಾಗಿಯೇ ಇರುತ್ತವೆ.

ಶ್ರೀ ಟಿ.ಬಿ. ಜಯಚಂದ್ರ : ಇದನ್ನು ಯಾವುದೇ ರೂಪದಲ್ಲಾದರೂ ಕೂಡ ಚರ್ಚೆ ಮಾಡುವುದಕ್ಕೆ ಅವಕಾಶವಿದೆ ಎನ್ನತಕ್ಕಂಥದ್ದು ನಮಗೂ ಗೊತ್ತಿದೆ. ಆದರೆ, ರಾಜ್ಯದ ರೈತರ ಸಮಸ್ಯೆಗೆ ಸಂಬಂಧಪಟ್ಟಂಥ ವಿಚಾರವಾಗಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಜಯಚಂದ್ರರವರೇ, ನಾನು ನಿಮಗೆ ಚರ್ಚೆ ಮಾಡಲಿಕ್ಕೆ ಅಡ್ಡಿ ಬರುತ್ತಿಲ್ಲ. ಮೊದಲು Question hour ಮುಗಿಯಲಿ ಎಂದು ಹೇಳುತ್ತಿದ್ದೇನಷ್ಟೇ. ತಾವೇಕೆ ಈ ವಿಷಯವನ್ನು ಇಷ್ಟೊಂದು prestige ಆಗಿ ತೆಗೆದುಕ್ಕೊಳ್ಳುದ್ದೀರೆಂಬುದು ನನಗರ್ಥವೇ ಆಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಇಲ್ಲಿ prestige ಪ್ರಶ್ನೆಯೇ ಇಲ್ಲ.

Sri. Siddaramaiah : I am not on prestige.

(ಗೊಂದಲ)

ಅಧ್ಯಕ್ಷರು : ನನಗರ್ಥವೇ ಆಗುತ್ತಿಲ್ಲ. One hour ಆದ ತಕ್ಷಣ ತೆಗೆದುಕೊಳ್ಳುತ್ತೇನೆಂದು ಹೇಳಿದೆನಲ್ಲ. ನೀವು ಆಗ ಬೇಕಾದಷ್ಟು ವಿಷಯ ಮಾತನಾಡಿ. ಯಾರು ಬೇಡವೆನ್ನುತ್ತಾರೆ? I will allow you.

ಶ್ರೀ ಸಿದ್ದರಾಮಯ್ಯ : ಆಯಿತು ಬಿಡಿ. ನೀವು ಒತ್ತಾಯ ಮಾಡುತ್ತಿದ್ದೀರಿ, alright, ನಾನು ಕುಳಿತುಕೊಳ್ಳುತ್ತೇನೆ. Immediately, after the question hour, I am going to raise, you please give permission to raise.

ಅಧ್ಯಕ್ಷರು : Definitely, O.K.